1396

ಮಾನ್ಯ ವಿಧಾನ ಪರಿಷತ್ ಸದಸ್ಯರಾದ ಶ್ರೀ ಡಿ.ಎಸ್. ಅರುಣ್ ಇವರು ನಿಯಮ 330ರ ಮೇಲೆಗೆ ನೀಡಿರುವ ನಿಲುವಳಿ ಸೂಚನೆ:

**ಶಿವಮೊಗ್ಗ ಜಿಲ್ಲೆಯಲ್ಲಿ ಉತ್ಪಾದನೆಯಾಗುವ ಅಡಿಕೆ ಮಾರಾಟವಾಗುವ ವಹಿವಾಟಿನ ತೆರಿಗೆ ಆದಾಯದ ಬಗ್ಗೆ ಗೊಂದಲವಿರುವ ಕುರಿತು.**

ಸನ್ಮಾನ್ಯ ಮುಖ್ಯಮಂತ್ರಿಯವರ ಉತ್ತರ:

2017 ರಲ್ಲಿ ಸರಕು ಮತ್ತು ಸೇವಾ ತೆರಿಗೆಯನ್ನು ಜಾರಿಗೆ ತಂದ ಮೇಲೆ ತೆರಿಗೆದಾಯಕ ವಹಿವಾಟು ಅಂದರೆ ಮಾರಾಟವಾಗುವ ಸರಕಿನ ಮೌಲ್ಯದ ಮೇಲೆ ಅದು ಯಾವ ರಾಜ್ಯ/ಕೇಂದ್ರಾಡಳಿತ ಪ್ರದೇಶಕ್ಕೆ ಮಾರಾಟವಾಗಿದೆ ಎನ್ನುವುದರ ಮೇಲೆ ಜಿ.ಎಸ್.ಟಿ. ಯನ್ನು ವಿಧಿಸಲಾಗುತ್ತದೆ. ಶಿವಮೊಗ್ಗ ಜಿಲ್ಲೆಯಿಂದ ಅಡಿಕೆಯು ಕರ್ನಾಟಕ ರಾಜ್ಯದ ಇತರೆ ಯಾವುದೇ ಸ್ಥಳದಲ್ಲಿ ಅಥವಾ ಶಿವಮೊಗ್ಗ ಜಿಲ್ಲೆಯಲ್ಲಿ ಇರುವ ವರ್ತಕರಿಗೆ ಮಾರಾಟವಾದರೆ ಅದರ ಮೇಲೆ ಎಸ್.ಜಿ.ಎಸ್.ಟಿ ಮತ್ತು ಸಿ.ಜಿ.ಎಸ್.ಟಿ. ಯನ್ನು ವಿಧಿಸಲಾಗುತ್ತದೆ. ಇದರಲ್ಲಿ ಎಸ್.ಜಿ.ಎಸ್.ಟಿ ತೆರಿಗೆಯ ಆದಾಯ ರಾಜ್ಯಕ್ಕೆ ಮತ್ತು ಸಿ.ಜಿ.ಎಸ್.ಟಿ. ತೆರಿಗೆಯು ಕೇಂದ್ರ ಸರ್ಕಾರಕ್ಕೆ ಜಮೆ ಆಗುತ್ತದೆ.

ಶಿವಮೊಗ್ಗ ಜಿಲ್ಲೆಯಲ್ಲಿ ಅಡಿಕೆ ಮಾರಾಟವಾಗಿ, ಖರೀದಿಸುವ ವರ್ತಕರು ಬೇರೆ ರಾಜ್ಯ/ಕೇಂದ್ರಾಡಳಿತ ಪ್ರದೇಶದಲ್ಲಿ ನೋಂದಾಯಿತರಾಗಿದ್ದರೆ ಆ ತೆರಿಗೆದಾಯಕ ವಹಿವಾಟಿನ ಮೇಲೆ ಐ.ಜಿ.ಎಸ್.ಟಿ ತೆರಿಗೆ (ಎಸ್.ಜಿ.ಎಸ್.ಟಿ ಮತ್ತು ಸಿ.ಜಿ.ಎಸ್.ಟಿ. ಯ ಒಟ್ಟು ಮೊತ್ತ) ವಿಧಿಸಲಾಗುತ್ತದೆ. ಇದನ್ನು ಶಿವಮೊಗ್ಗ ಜಿಲ್ಲೆಯಲ್ಲಿ ಮಾರಾಟ ಮಾಡುವ ವರ್ತಕರು ಸಂಗ್ರಹಿಸಿ ತಮ್ಮ ಜಿ.ಎಸ್.ಟಿ. ರಿಟರ್ನ್ ಜೊತೆಯಲ್ಲಿ ರಾಜ್ಯದಲ್ಲಿ ಸಂದಾಯ ಮಾಡುತ್ತಾರಾದರೂ, ಈ ತೆರಿಗೆಯು ಯಾವ ರಾಜ್ಯಕ್ಕೆ /ಕೇಂದ್ರ ಆಡಳಿತ ಪ್ರದೇಶಕ್ಕೆ ಅಡಿಕೆ ಮಾರಾಟವಾಗಿದೆಯೋ ಅಲ್ಲಿಗೆ ವರ್ಗಾಯಿಸಲ್ಪಡುತ್ತದೆ.

ಅಡಿಕೆಯ ಮೇಲೆ ಜಿ.ಎಸ್.ಟಿ. ದರವು 5% ಇರುತ್ತದೆ. ಸ್ಥಳೀಯವಾಗಿ ಅಂದರೆ ಕರ್ನಾಟಕದಲ್ಲಿ ಒಬ್ಬರು ವರ್ತಕರಿಂದ ಇನ್ನೊಬ್ಬ ವರ್ತಕರಿಗೆ ಮಾರಾಟವಾದರೆ, ಸರಕಿನ ಮೌಲ್ಯದ ( ವಹಿವಾಟಿನ) ಮೇಲೆ 2.5% ಎಸ್.ಜಿ.ಎಸ್.ಟಿ. ಯನ್ನು, 2.5% ಸಿ.ಜಿ.ಎಸ್.ಟಿ. ಯನ್ನು, ವಿಧಿಸಲಾಗುತ್ತದೆ. ಇದೇ ಸರಕು ರಾಜ್ಯದಲ್ಲಿನ ವರ್ತಕರಿಂದ ಇನ್ನೊಂದು ರಾಜ್ಯದಲ್ಲಿ ನೋಂದಾಯಿತನಾಗಿರುವ ವರ್ತಕರಿಗೆ ಮಾರಾಟವಾದರೆ ಅದರ ಮೇಲೆ 5% ಐ.ಜಿ.ಎಸ್.ಟಿ. ಯನ್ನು ವಿಧಿಸಲಾಗುತ್ತದೆ.

ಸರಕು ಮತ್ತು ಸೇವಾ ತೆರಿಗೆ ಕಾನೂನಿನ ಪ್ರಕಾರ ಯಾವುದೇ ಸರಕು ಅಥವಾ ಸೇವೆಗಳು ಯಾವ ಸ್ಥಳದಲ್ಲಿ ಉಪಯೋಗಿಸಲ್ಪಡುತ್ತವೆಯೋ (consumed), ಅದರ ಮೇಲೆ ಆಕರವಾಗುವ ತೆರಿಗೆ ಅಲ್ಲಿಗೆ ವರ್ಗಾವಣೆ ಆಗಬೇಕು ಎನ್ನುವ ಕಾರ್ಯನೀತಿ ಇರುವುದರಿಂದ ಈ ವ್ಯವಸ್ಥೆ ಇರುತ್ತದೆ. ಉದಾಹರಣೆಯಾಗಿ, 2019-20 ನೇ ಸಾಲಿನಲ್ಲಿ ಶಿವಮೊಗ್ಗ ಜಿಲ್ಲೆಯಲ್ಲಿ ಮಾರಾಟವಾಗಿರುವ ಅಡಿಕೆಯ ಮೌಲ್ಯವು ₹ 5294.66 ಕೋಟಿ ಆಗಿದ್ದು, ಇದರ ಮೇಲೆ ಒಟ್ಟು ಜಿ.ಎಸ್.ಟಿ. ಸಂಗ್ರಹಣೆಯು ₹ 261.33 ಕೋಟಿ ಆಗಿರುತ್ತದೆ. ಆದರೆ ಇದರಲ್ಲಿ ನಮ್ಮ ರಾಜ್ಯಕ್ಕೆ ಬಂದ ಆದಾಯ ಕೇವಲ ₹ 67.04 ಕೋಟಿ ಮಾತ್ರ ಆಗಿರುತ್ತದೆ. ಉಳಿದಂತೆ ₹ 67.04 ಕೋಟಿಯು ಕೇಂದ್ರ ಸರ್ಕಾರಕ್ಕೆ ನಮ್ಮ ರಾಜ್ಯದಿಂದ ನೇರವಾಗಿ ಸಂಗ್ರಹವಾಗಿರುತ್ತದೆ. ರಾಜ್ಯದಲ್ಲಿ ಸಂಗ್ರಹವಾಗಿರುವ ಉಳಿದ ₹ 127.03 ಕೋಟಿಯು ಐ.ಜಿ.ಎಸ್.ಟಿ. ತೆರಿಗೆಯಾಗಿದ್ದು, ಇದು ಆ ಸರಕು ಯಾವ ರಾಜ್ಯದಲ್ಲಿ ನೋಂದಾಯಿತನಾಗಿರುವ ವರ್ತಕನಿಗೆ ಮಾರಾಟವಾಗಿದೆಯೋ ಆ ರಾಜ್ಯಕ್ಕೆ ವರ್ಗಾವಣೆಗೊಳ್ಳುತ್ತದೆ. ಈ ಮೊತ್ತವನ್ನು ಆ ರಾಜ್ಯದ ವರ್ತಕನು ಇನ್ ಪುಟ್ ತೆರಿಗೆಯಾಗಿ ಮರು ಮಾರಾಟದ ಮೇಲೆ ಅದನ್ನು ಎಸ.ಜಿ.ಎಸ್.ಟಿ ಸಂದಾಯಕ್ಕೆ ಉಪಯೋಗಿಸಿಕೊಂಡರೆ ಆ ಮೊತ್ತದ ತೆರಿಗೆ ಆದಾಯ ಆ ರಾಜ್ಯಕ್ಕೆ ಹೋಗುತ್ತದೆ. ಒಂದು ವೇಳೆ ಆ ವರ್ತಕನು ಸದರಿ ಇನ್ ಪುಟ್ ತೆರಿಗೆಯನ್ನು ಸಿ.ಜಿ.ಎಸ್.ಟಿ ಸಂದಾಯಕ್ಕೆ ಉಪಯೋಗಿಸಿಕೊಂಡರೆ ಆ ಮೊತ್ತವು ಕೇಂದ್ರ ಸರ್ಕಾರಕ್ಕೆ ವರ್ಗಾವಣೆಗೊಳ್ಳುತ್ತದೆ. ಒಂದು ವೇಳೆ ಸದರಿ ಐ.ಜಿ.ಎಸ್.ಟಿ. ಇನ್ ಪುಟ್ ತೆರಿಗೆಯನ್ನು ಮತ್ತೆ ಬೇರೆ ರಾಜ್ಯದ ವರ್ತಕರಿಗೆ ಮಾರಾಟ ಮಾಡಿದರೆ ಅದು



Generated from eOffice by G JAGADEESHA, CMO-JS(GJ), JOINT SECREATRY, CMO on 22/12/2022 12:29 PM

ಆ ರಾಜ್ಯಕ್ಕೆ ವರ್ಗಾವಣೆಗೊಳ್ಳುತ್ತದೆ. ಆ ಸರಕು ಆ ರಾಜ್ಯದಲ್ಲಿ/ ರಾಜ್ಯದಿಂದ ಮತ್ತೆ ಮಾರಾಟವಾಗದಿದ್ದಲ್ಲಿ (ಅಲ್ಲಿಯೆ ಅದೇ ರೂಪದಲ್ಲಿ ಉಪಯೋಗಿಸಲ್ಪಟ್ಟರೆ) ಆ ರಾಜ್ಯಕ್ಕೆ ವರ್ಗಾವಣೆಗೊಂಡಿರುವ ತೆರಿಗೆ ಮೊತ್ತದ ಅರ್ಧ ಭಾಗವು ಆ ರಾಜ್ಯಕ್ಕೆ ಉಳಿದ ಅರ್ಧ ಭಾಗ ಕೇಂದ್ರ ಸರ್ಕಾರಕ್ಕೆ ಜಮೆ ಆಗುತ್ತದೆ.

ವಾಣಿಜ್ಯ ತೆರಿಗೆ ಇಲಾಖೆಯ ಶಿವಮೊಗ್ಗ ಜಿಲ್ಲೆಯ ಕಛೇರಿಗಳಲ್ಲಿ, ಆ ಜಿಲ್ಲೆಯಲ್ಲಿ ನೋಂದಾಯಿತರಾಗಿರುವ ವರ್ತಕರ ಕೈಯಲ್ಲಿ ಮಾರಾಟವಾಗುವ ಅಡಿಕೆ ಬೆಳೆಯ ವಹಿವಾಟಿನ ಮತ್ತು ಅದರ ಮೇಲೆ ಆಕರವಾಗುವ ಮೂರು ರೀತಿಯ ಜಿ.ಎಸ್.ಟಿ. ತೆರಿಗೆಗಳ ಕಳೆದ ನಾಲ್ಕು ವರ್ಷಗಳ ಮಾಹಿತಿ ಲಭ್ಯವಿದ್ದು, ವಿವರಗಳು ಈ ಕೆಳಕಂಡಂತಿರುತ್ತದೆ:

| ವಾಣಿಜ್ಯ ತೆರಿಗೆಗಳ ಜಂಟಿ ಆಯುಕ್ತರು (ಆಡಳಿತ), ಮಲೆನಾಡು ವಿಭಾಗ, ಶಿವಮೊಗ್ಗ | | | | | | |
|---|---|---|---|---|---|---|
| ಶಿವಮೊಗ್ಗ ಜಿಲ್ಲೆಯಲ್ಲಿ ಉತ್ಪಾದನೆಯಾಗಿರುವ ಅಡಿಕೆ ಒಟ್ಟು ತೆರಿಗೆದಾಯಕ ಮಾಹಿತಿ ವಿವರ | | | | | | (ವಹಿವಾಟು ರೂ.ಕೋಟಿಗಳಲ್ಲಿ) |
| ಆರ್ಥಿಕ ವರ್ಷ | ಒಟ್ಟು ತೆರಿಗೆದಾಯಕ ವಹಿವಾಟು | ತೆರಿಗೆ | | | | |
| | | SGST | CGST | IGST | CESS | GST |
| 2019-20 | 5294.66 | 67.04 | 67.04 | 127.23 | 0 | 261.33 |
| 2020-21 | 4356.66 | 62.37 | 62.37 | 95.89 | 0 | 220.63 |
| 2021-22 | 5279.09 | 83.51 | 83.51 | 97.69 | 0 | 264.71 |
| 2022-23 | 2264.36 | 34.52 | 34.52 | 44.53 | 0 | 113.81 |
| ಒಟ್ಟು | **17194.8** | **247.44** | **247.44** | **365.34** | **0** | **860.48** |
| | | | | | | |

ಇದರಲ್ಲಿ ಶಿವಮೊಗ್ಗ ಜಿಲ್ಲೆಯಲ್ಲಿ ಬೆಳೆದ, ಶಿವಮೊಗ್ಗ ಜಿಲ್ಲೆಯ ಅಕ್ಕಪಕ್ಕದ ಜಿಲ್ಲೆಗಳಲ್ಲಿ, ಇಲ್ಲವೆ ಬೇರೆ ರಾಜ್ಯಗಳಲ್ಲಿ ಬೆಳೆದ ಶಿವಮೊಗ್ಗ ವರ್ತಕರಿಗೆ ಮಾರಾಟ/ ರವಾನೆಯಾಗಿ ಅವರ ಕೈಯಲ್ಲಿ ಮಾರಾಟವಾದ ವಹಿವಾಟು ಸಹ ಸೇರಿರುತ್ತದೆ. ಅದೇ ರೀತಿ ಶಿವಮೊಗ್ಗ ಜಿಲ್ಲೆಯಲ್ಲಿ ಬೆಳೆದ ಅಡಿಕೆ ಅಕ್ಕಪಕ್ಕದ ಜಿಲ್ಲೆಗಳ ವರ್ತಕರಿಗೆ, ಇಲ್ಲವೆ ಬೇರೆ ರಾಜ್ಯದ ವರ್ತಕರಿಗೆ ರೈತರಿಂದ ನೇರವಾಗಿ ಹೋಗಿ ಅಲ್ಲಿ ಮಾರಾಟವಾಗುವುದರಿಂದ, ಅದರ ವಹಿವಾಟಿನ ವಿವರಗಳು ಶಿವಮೊಗ್ಗ ಜಿಲ್ಲೆಯ ವಾಣಿಜ್ಯ ತೆರಿಗೆ ಇಲಾಖೆಯ ದಾಖಲೆಗಳಲ್ಲಿ ಸೇರಿರುವುದಿಲ್ಲ.

ಸಂಖ್ಯೆ: ಆಇ 84 ಸಿಎಸ್‌ಎಲ್ 2022

(ಬಸವರಾಜ ಬೊಮ್ಮಾಯಿ)
ಮುಖ್ಯಮಂತ್ರಿ.



Generated from eOffice by G JAGADEESHA, CMO-JS(GJ), JOINT SECREATRY, CMO on 22/12/2022 12:29 PM

ವಿ-330 ಕ್ರ. 53

ಕಂಪ್ಯೂಟರ್

**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ.ಡಿ.ಎಸ್. ಅರುಣ ರವರು ನಿಯಮ 330 ರಡಿ ಪ್ರಸ್ತಾಪಿಸಿರುವ ಸೂಚನೆಗೆ ಉತ್ತರಿಸುವ ಬಗ್ಗೆ.**

**ಪ್ರಶ್ನೆ:**

**ಕಳೆದ ಎರಡು ವರ್ಷದಲ್ಲಿ ಶಿವಮೊಗ್ಗ ಜಿಲ್ಲೆಯಲ್ಲಿ ಅಡಿಕೆ ಉತ್ಪಾದನೆಯಾಗುವ ಪ್ರಮಾಣ, ಸದರಿ ಜಿಲ್ಲೆಯ ಅಡಿಕೆ ಮಾರಾಟದ ಒಟ್ಟು ವಹಿವಾಟಿನ ತೆರಿಗೆ ಆದಾಯದ ಬಗ್ಗೆ, ಗೊಂದಲಗಳ ಬಗ್ಗೆ.**

**ಉತ್ತರ**

ಶಿವಮೊಗ್ಗ ಜಿಲ್ಲೆಯಲ್ಲಿ 2020-21 ನೇ ಸಾಲಿನಲ್ಲಿ 1,02,536 ಹೆಕ್ಟೇರ್ ಪ್ರದೇಶದಲ್ಲಿ ಅಡಿಕೆ ಬೆಳೆಯಲಾಗಿದ್ದು, ಉತ್ಪಾದನೆ 1,28,385.42 ಮೆ. ಟನ್ ಗಳಷ್ಟು ಹಾಗೂ 2021-22 ನೇ ಸಾಲಿನಲ್ಲಿ 1,14,039 ಹೆಕ್ಟೇರ್ ಪ್ರದೇಶದಲ್ಲಿ ಅಡಿಕೆ ಉತ್ಪಾದನೆ 1,48,251 ಮೆ. ಟನ್ ಗಳಷ್ಟು ಇರುತ್ತದೆ.

ಅಡಿಕೆಯು ಕೃಷಿ ನಿಯಂತ್ರಿತ ಉತ್ಪನ್ನವಾಗಿದ್ದು, 2020-21 ಮತ್ತು 2021-22 ನೇ ಸಾಲಿನಲ್ಲಿ ಶಿವಮೊಗ್ಗ ಜಿಲ್ಲೆಯಲ್ಲಿ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗಳಲ್ಲಿ ಆವಕ, ಜಾವಕ ಹಾಗೂ ವಸೂಲಾದ ಮಾರುಕಟ್ಟೆ ಶುಲ್ಕದ ಮಾಹಿತಿಯು ಈ ಕೆಳಕಂಡಂತಿದೆ.

(ಪ್ರಮಾಣ ಕ್ವಿಂಟಾಲ್)

| ಕ್ರ. ಸಂ. | ಸಮಿತಿಯ ಹೆಸರು | 2020-21 | | | 2021-22 | | |
|---|---|---|---|---|---|---|---|
| | | ಆವಕ | ಜಾವಕ | ವಸೂಲಾದ ಮಾ ಶುಲ್ಕ (ರೂ. ಗಳಲ್ಲಿ) | ಆವಕ | ಜಾವಕ | ವಸೂಲಾದ ಮಾ ಶುಲ್ಕ (ರೂ. ಗಳಲ್ಲಿ) |
| 1. | ಶಿವಮೊಗ್ಗ | 414342 | 427272 | 9,00,36,181 | 430862 | 436663 | 9,86,14,043 |
| 2. | ಸಾಗರ | 102518 | 90749 | 2,16,28,644 | 119282 | 100344 | 2,05,76,527 |
| 3. | ಭದ್ರಾವತಿ | 36143.525 | 36198.615 | 56,82,246 | 55545.857 | 42770.818 | 63,27,724 |
| 4. | ಶಿಕಾರಿಪುರ | 8956 | 8956 | 17,93,293 | 8347 | 8347 | 19,14,688 |
| 5. | ತೀರ್ಥಹಳ್ಳಿ | 77078.18 | 77078.18 | 1,41,64,731 | 67405.83 | 67405.83 | 1,62,30,682 |
| 6. | ಹೊಸನಗರ | 47905.185 | 17430.319 | 1,09,14,730 | 53318.076 | 47184.687 | 1,17,50,192 |
| 7. | ಸೊರಬ | 71.25 | 71.25 | 17,924 | - | - | - |
| | **ಒಟ್ಟು** | **687014.14** | **657755.364** | **14,42,37,749** | **734760.8** | **702715.34** | **15,54,13,856** |

ಸದರಿ ತೆರಿಗೆ ವಹಿವಾಟಿನ ಆದಾಯದ ವಿಷಯವು ತೋಟಗಾರಿಕೆ ಇಲಾಖೆಯ ವ್ಯಾಪ್ತಿಗೆ ಒಳಪಡುವುದಿಲ್ಲ. ಅದಾಗ್ಯೂ ವಾಣಿಜ್ಯ ತೆರಿಗೆ ಇಲಾಖೆಯು ನೀಡಿರುವ ಮಾಹಿತಿಯಂತೆ ಕಳೆದು ಎರಡು ವರ್ಷಗಳಲ್ಲಿ ಶಿವಮೊಗ್ಗ ಜಿಲ್ಲೆಯ ಅಡಿಕೆ ಬೆಳೆಯ ಒಟ್ಟು ವಹಿವಾಟಿನ ತೆರಿಗೆ ಆದಾಯದ ವಿವರ ಕೆಳಕಂಡಂತಿದೆ.

| ವಾಣಿಜ್ಯ ತೆರಿಗೆ ಜಂಟಿ ಆಯುಕ್ತರು (ಆಡಳಿತ) ಮಳೆನಾಡು ವಿಭಾಗ, ಶಿವಮೊಗ್ಗ. | | | | | | |
|---|---|---|---|---|---|---|
| ಶಿವಮೊಗ್ಗ ಜಿಲ್ಲೆಯಲ್ಲಿ ಕಳೆದ ಎರಡು ವರ್ಷಗಳಲ್ಲಿ ಉತ್ಪಾದನೆಯಾಗಿರುವ ಅಡಿಕೆ ಒಟ್ಟು ತೆರಿಗೆದಾಯಕ ಮಾಹಿತಿ ವಿವರ | | | | | | (ವಹಿವಾಟು ಕೋಟಿಗಳಲ್ಲಿ) |
| ಆರ್ಥಿಕ ವರ್ಷ | ಒಟ್ಟು ತೆರಿಗೆದಾಯಕ ವಹಿವಾಟು | ತೆರಿಗೆ | | | | |
| | | SGST | CGST | IGST | CESS | GST |
| 2020-21 | 4356.66 | 62.37 | 62.37 | 95.89 | 0 | 220.63 |
| 2021-22 | 5279.09 | 83.51 | 83.51 | 97.69 | 0 | 264.71 |
| **ಒಟ್ಟು** | **9635.75** | **145.88** | **145.88** | **193.58** | **0** | **485.34** |

**ಸಂಖ್ಯೆ: HORTI 667 HGM 2022**

(ಮುನಿರತ್ನ)
ತೋಟಗಾರಿಕೆ, ಯೋಜನೆ,ಕಾರ್ಯಕ್ರಮ
ಸಂಯೋಜನೆ ಮತ್ತು ಸಾಂಖ್ಯಿಕ ಸಚಿವರು